## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಬಿಬಿಎಂಪಿ ವ್ಯಾಪ್ತಿಯ ಸರ್ವಜ್ಞನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಸಂಬಂಧಿಸಿದಂತೆ "ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ" ಯೋಜನೆಯಡಿ ನಿಗಧಿಪಡಿಸಿರುವ ರೂ.80.00 ಕೋಟಿಗಳ ಅಂದಾಜು ಮೊತ್ತದ ಕಾಮಗಾರಿಗಳ ಕ್ರಿಯಾ ಯೋಜನೆಗೆ ಸರ್ಕಾರದ ಅನುಮೋದನೆ ನೀಡುವ ಬಗ್ಗೆ.

**ಓದಲಾಗಿದೆ:**

1. ಮಾನ್ಯ ಮುಖ್ಯಮಂತ್ರಿಗಳು ದಿನಾಂಕ: 15-08-2021 ರಂದು ಭಾರತದ ಸ್ವಾತಂತ್ರ್ಯೋತ್ಸವದ 75ನೇ ವರ್ಷದ ಆಚರಣೆ ಸಂದರ್ಭದಲ್ಲಿ ಮಾಡಿರುವ ಘೋಷಣೆ.
2. ಸರ್ಕಾರದ ಆದೇಶ ಸಂಖ್ಯೆ: ನಅಇ 197 ಎಂಎನ್‌ವೈ 2021 (ಇ), ದಿನಾಂಕ: 14-01-2022.
3. ಸರ್ಕಾರದ ಆದೇಶ ಸಂಖ್ಯೆ: ನಅಇ 197 ಎಂಎನ್‌ವೈ 2021 (ಇ), ದಿನಾಂಕ: 25-02-2022 (22).
4. ಮುಖ್ಯ ಆಯುಕ್ತರು, ಬಿಬಿಎಂಪಿ ಇವರ ಪತ್ರ ಸಂಖ್ಯೆ: ಮುಆ/ಪಿಆರ್/ ಜಿ-307/2022-23, ದಿನಾಂಕ: 26-04-2022.

*****

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ: (1) ರಲ್ಲಿ ಓದಲಾದ ದಿನಾಂಕ: 15-08-2021 ರಂದು ಭಾರತದ ಸ್ವಾತಂತ್ರ್ಯೋತ್ಸವದ 75ನೇ ವರ್ಷದ ಆಚರಣೆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮಾಡಿರುವ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಬೆಂಗಳೂರು ನಗರದಲ್ಲಿ ಬಿಬಿಎಂಪಿ ಮೂಲಕ ಮುಖ್ಯ ಮೂಲಭೂತ ಸೌಕರ್ಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅಮೃತ ನಗರೋತ್ಥಾನ ಯೋಜನೆ ಅಡಿಯಲ್ಲಿ ರೂ.6000.00 ಕೋಟಿಗಳನ್ನು ಒದಗಿಸಲಾಗುವುದು ಎಂದು ಘೋಷಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ: (2) ರಲ್ಲಿ ಓದಲಾದ ದಿನಾಂಕ: 14-01-2022ರ ಆದೇಶದಲ್ಲಿ, ಮಾನ್ಯ ಮುಖ್ಯಮಂತ್ರಿಗಳು ದಿನಾಂಕ: 15-08-2021 ರಂದು ಭಾರತದ ಸ್ವಾತಂತ್ರ್ಯೋತ್ಸವದ 75ನೇ ವರ್ಷದ ಸಂದರ್ಭದಲ್ಲಿ ಘೋಷಿಸಿದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದ ರೂ.6000.00 ಕೋಟಿಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳುವ "ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ" ಯೋಜನೆಗೆ ಸರ್ಕಾರದ ತಾತ್ವಿಕ ಅನುಮೋದನೆ ನೀಡಿ ಆದೇಶಿಸಿದೆ.

ಮೇಲೆ ಕ್ರಮ ಸಂಖ್ಯೆ: (3) ರಲ್ಲಿ ಓದಲಾದ ದಿನಾಂಕ: 25-02-2022 (22) ರ ಆದೇಶದಲ್ಲಿ, ಸರ್ಕಾರದ ಆದೇಶ ಸಂಖ್ಯೆ: ನಅಇ 197 ಎಂಎನ್‌ವೈ 2021 (ಇ), ದಿನಾಂಕ: 14-01-2022 ರಂತೆ ಅನುಮೋದಿಸಲಾಗಿರುವ "ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ" ಯೋಜನೆಗೆ ಸಂಬಂಧಿಸಿದಂತೆ ಸರ್ವಜ್ಞನಗರ ವಿಧಾನ ಸಭಾ ಕ್ಷೇತ್ರಕ್ಕೆ ರೂ.80.00 ಕೋಟಿಗಳ ಅನುದಾನವನ್ನು ನಿಗಧಿಗೊಳಿಸಿ ಆದೇಶಿಸಲಾಗಿರುತ್ತದೆ.

. . .2/-

ಮೇಲೆ ಕ್ರಮ ಸಂಖ್ಯೆ: (4) ರಲ್ಲಿ ಓದಲಾದ ದಿನಾಂಕ: 26-04-2022 ರ ಪತ್ರದಲ್ಲಿ, ಮುಖ್ಯ ಆಯುಕ್ತರು, ಬಿಬಿಎಂಪಿ ರವರು, ಮಾನ್ಯ ಮುಖ್ಯಮಂತ್ರಿಗಳು ದಿನಾಂಕ: 15-08-2021 ರಂದು ಭಾರತದ ಸ್ವಾತಂತ್ರ್ಯೋತ್ಸವದ 75ನೇ ವರ್ಷದ ಸಂದರ್ಭದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು "ಅಮೃತ ನಗರೋತ್ಥಾನ ಯೋಜನೆ" ಅಡಿಯಲ್ಲಿ ರೂ.6000.00 ಕೋಟಿಗಳನ್ನು ಒದಗಿಸಲಾಗುವುದು ಎಂದು ಘೋಷಿಸಿರುತ್ತಾರೆ. ಅದರಂತೆ, ಸರ್ಕಾರದ ಆದೇಶ ಸಂಖ್ಯೆ: ನಅಇ 197 ಎಂಎನ್ ವೈ 2021 (ಇ), ದಿನಾಂಕ: 25-02-2022 (22) ರಲ್ಲಿ ಸರ್ವಜ್ಞನಗರ ವಿಧಾನಸಭಾ ಕ್ಷೇತ್ರಕ್ಕೆ ಒಟ್ಟು ರೂ.80.00 ಕೋಟಿಗಳ ಅನುದಾನ ನಿಗಧಿಪಡಿಸಿ ಆದೇಶಿಸಲಾಗಿದೆ.

ಅದರಂತೆ, ಸರ್ಕಾರವು ನಿಗಧಿಪಡಿಸಿರುವ ಅನುದಾನದಡಿಯಲ್ಲಿ ರಸ್ತೆ ಅಭಿವೃದ್ಧಿ, ಆರ್.ಓ.ಪ್ಲಾಂಟ್ ನಿರ್ವಹಣೆ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಕೈಗೊಳ್ಳಲು ಕ್ರಿಯಾಯೋಜನೆ ಅಂತಿಮಗೊಳಿಸುವ ಸಂದರ್ಭದಲ್ಲಿ ಮಾನ್ಯ ವಿಧಾನಸಭಾ ಕ್ಷೇತ್ರದ ಶಾಸಕರ ಕೋರಿಕೆಗಳನ್ನು ಪರಿಗಣಿಸಿ, ಕ್ರಿಯಾಯೋಜನೆಯನ್ನು ಅಂತಿಮಗೊಳಿಸುವಂತೆ ಸೂಚಿಸಲಾಗಿರುತ್ತದೆ.

ಆದುದರಿಂದ, ಮಾನ್ಯ ಶಾಸಕರು, ಸರ್ವಜ್ಞನಗರ ವಿಧಾನ ಸಭಾ ಕ್ಷೇತ್ರ ರವರು ಸೂಚಿಸಿರುವ ಹಾಗೂ ಮುಖ್ಯ ಅಭಿಯಂತರರು (ಪೂರ್ವ) ರವರು ಸಲ್ಲಿಸಿರುವ ಪ್ರಸ್ತಾವನೆಯಂತೆ ಸರ್ವಜ್ಞನಗರ ವಿಧಾನಸಭಾ ಕ್ಷೇತ್ರಕ್ಕೆ ಮೀಸಲಿಟ್ಟಿರುವ ರೂ.80.00 ಕೋಟಿಗಳ ಅನುದಾನದಡಿಯಲ್ಲಿ ಕೈಗೊಳ್ಳುವ ಕಾಮಗಾರಿಗಳ ಕ್ರಿಯಾಯೋಜನೆಗೆ ಸರ್ಕಾರದ ಅನುಮೋದನೆ ನೀಡುವಂತೆ ಮುಖ್ಯ ಆಯುಕ್ತರು, ಬಿಬಿಎಂಪಿ ರವರು ಕೋರಿರುತ್ತಾರೆ.

ಬಿಬಿಎಂಪಿ ಮುಖ್ಯ ಆಯುಕ್ತರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ನಅಇ 244 ಎಂಎನ್‌ವೈ 2022 (ಇ),**
**ಬೆಂಗಳೂರು, ದಿನಾಂಕ: 17-05-2022.**

ಸರ್ಕಾರದ ಆದೇಶ ಸಂಖ್ಯೆ: ನಅಇ 197 ಎಂಎನ್‌ವೈ 2021 (ಇ), ದಿನಾಂಕ: 25-02-2022 (22) ರಂತೆ "ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ" ಯೋಜನೆಯಡಿ ಸರ್ವಜ್ಞನಗರ ವಿಧಾನ ಸಭಾ ಕ್ಷೇತ್ರಕ್ಕೆ ರೂ.80.00 ಕೋಟಿಗಳ ಅನುದಾನವನ್ನು ನಿಗದಿಗೊಳಿಸಿ ಆದೇಶಿಸಿದ್ದು, ಬಿಬಿಎಂಪಿ ಮುಖ್ಯ ಆಯುಕ್ತರ ಪ್ರಸ್ತಾವನೆಯಂತೆ, ಸದರಿ ರೂ.80.00 ಕೋಟಿಗಳ ಅಂದಾಜು ಮೊತ್ತದ ಈ ಕೆಳಕಂಡ ಕಾಮಗಾರಿಗಳ ಕ್ರಿಯಾಯೋಜನೆ ಪಟ್ಟಿಗೆ ಈ ಆದೇಶದಲ್ಲಿ ನಮೂದಿಸಿರುವ ಷರತ್ತುಗಳಿಗೊಳಪಟ್ಟು ಸರ್ಕಾರದ ಅನುಮೋದನೆ ನೀಡಿ ಆದೇಶಿಸಿದೆ.

| Sl. No. | Ward No. | Name of the Work | Est Cost (Rs. In Lakhs) |
|---|---|---|---|
| | | **I. ARTERIAL AND SUB ARTERIAL ROADS** | |
| 1. | 27 | Improvements of drains, footpath and asphalting to Banaswadi Main Road from ITC Flyover to Mukundha Theatre and approach roads | 350.00 |
| 2. | 27 | Improvements of drains, footpath and asphalting to Bata Showroom to 7th Main, Uttam Sagar Junction and approach roads | 150.00 |
| 3. | 24 | Improvements of drains, footpath and asphalting to Agara Road –from Hennur Main Road to Agara Junction (Hennur village Roads and approach roads) | 200.00 |
| 4. | 27 | Improvements of drains, footpath and asphalting to Chikka Banaswadi Road (Bata Junction) –from Banaswadi Road to 7th Cross, Kasturi Nagar | 150.00 |
| 5. | 28 | Improvements of drains, footpath and asphalting to Nanjundappa Road – Nehru Road from Kullappa Circle to 7th Main Road | 125.00 |
| 6. | 49 | Improvements of drains, footpath and asphalting to Oil Mill Road (and approach roads ) –from Hennur Main Road to Kammanahalli Main Road | 200.00 |
| 7. | 49 | Improvements of drains, footpath and asphalting to Banaswadi Railway Station Road from Banaswadi Road – to Lingarajapuram Underpass | 150.00 |
| 8. | 59 | Improvements of drains, footpath and asphalting to Wheeler Extension Road – from Pottery Road to Banaswadi Railway Station and approach roads | 100.00 |
| 9. | 23 | Improvements of drains, footpath and asphalting to KHB Main Road – from Railway Gate to ORR | 150.00 |
| 10. | 59 | Improvements of drains, footpath and asphalting to Davis Road – from Wheeler Extension Road to Hennur Main Road and approach roads. | 150.00 |
| 11. | 23 | Improvements of drains, footpath and asphalting to Shampura Main Road – from Shampura Railway Gate to Nagawara Main Road | 200.00 |
| 12. | 49 | Improvements to drains, footpaths and concrete roads at Lingarajapuram Flyover Service Roads | 200.00 |

. . .4/-

| | | | |
|---|---|---|---|
| 13. | 24 | Comprehensive Developments of Roads and Drains and other Allied works from 1st Main HBR (Indira Canteen Road) 5th Cross Vinayaka Temple Road, in ward No 24 HBR Layout | 200.00 |
| 14. | 24 | Comprehensive Developments of Roads and Drains and other Allied works from 5th Cross Vinayaka Temple Road to 10th Main | 200.00 |
| 15. | 24 | Improvements of drains, footpath and asphalting to 1st Main Road, 2nd Block, Indira Canteen Road (from 80 ft Road to Railway Gate) | 100.00 |
| 16. | 24 | Asphalting to HBR 1st Main, 3rd Block from HBR 80 ft Road to Nagawara Main Road (Narendra Tent Road) | 200.00 |
| 17. | 24 | Improvements of drains, footpath and asphalting to 29th cross and 19th Main, 5th Block, HBR Layout | 175.00 |
| | | **SUB TOTAL** | **3000.00** |
| | | **II. WARD ROADS**<br>**COMPREHENSIVE DEVELOPMENTS OF ROADS, FOOTPATH AND DRAINS IN SARVAGNANAGAR CONSTITUENCY** | |
| 1. | 23 | Comprehensive Developments of Roads and Drains and other Allied works in Gandhinagar, Samadhan Nagar, Chuna lanes and other surrounding areas in ward No 23 Nagawara | 150.00 |
| 2. | 23 | Comprehensive Developments of Roads and Drains and other Allied works in Byrappa layout, Govindapura village and other surrounding areas in ward No 23 Nagawara | 200.00 |
| 3. | 24 | Comprehensive Developments of Roads and Drains and other Allied works in Subhash layout, 2nd Block HBR layout and other surrounding areas in ward No 24 HBR Layout | 150.00 |
| 4. | 24 | Comprehensive Developments of Roads and Drains and other Allied works in Hilal Nagar, 3rd Block HBR Layout and other surrounding areas in ward No 24 HBR Layout | 200.00 |
| 5. | 24 | Comprehensive Developments of Roads and Drains and other Allied works in 5th Block HBR layout and other surrounding areas in ward No 24 HBR Layout | 300.00 |
| 6. | 24 | Comprehensive Developments of Roads and Drains and other Allied works in Kuppuswamy Layout, CMR garden and 4th Block HBR layout and other surrounding areas in ward No 24 HBR Layout | 150.00 |

. . .5/-

| | | | |
|---|---|---|---|
| 7. | 24 | Comprehensive Developments of Roads and Drains and other Allied works in Poornanjaneya layout, Kaveri layout, Chikkanna layout and other surrounding areas in ward No 24 HBR Layout | 100.00 |
| 8. | 30 | Comprehensive Developments of Roads and Drains and other Allied works in B M layout, Venkateshpuram and other surrounding areas in ward No 30 K G halli | 150.00 |
| 9. | 30 | Comprehensive Developments of Roads and Drains and other Allied works in Pillanna Garden, Arokyamma layout, Sonnappa block and other surrounding areas in ward No 30 K G halli | 200.00 |
| 10. | 27 | Comprehensive Developments of Roads and Drains in OMBR Layout and Surrounding area in Ward No.27, Banasawadi. | 100.00 |
| 11. | 27 | Comprehensive Developments of Roads and Drains in Sampige road and Indira Street and Jai Jawan Nagara Cross Roads and Surrounding area in Ward No.27, Banasawadi | 100.00 |
| 12. | 27 | Comprehensive Developments of Roads and Drains in Raj Kumar Park and Surrounding area in Ward No.27, Banasawadi | 100.00 |
| 13. | 27 | Comprehensive Developments of Roads and Drains in Erappa Reddy Layout and Lakshmamma Layout and Surrounding area in Ward No.27, Banasawadi | 100.00 |
| 14. | 27 | Comprehensive Developments of Roads, Drain and Footpath in HRBR Layout, 8th Main road and Surrounding area in Ward No.27, Banasawadi | 100.00 |
| 15. | 28 | Comprehensive Developments of Roads and Drain in Ramaiah Layout and Surrounding area in Ward No.28, Kammanahalli. | 100.00 |
| 16. | 28 | Comprehensive Developments of Roads and Drain in Janakiram Layout and Surrounding area in Ward No.28, Kammanahalli. | 100.00 |
| 17. | 28 | Comprehensive Developments of Roads and Drain in Jai Bharath Nagara and Surrounding area in Ward No.28, Kammanahalli. | 100.00 |
| 18. | 28 | Comprehensive Developments of Roads and Drain at Jeevanahalli and ITC Colony area in Ward No.59, Maruthi Seva Nagara. | 100.00 |
| 19. | 59 | Comprehensive Developments of Roads and Drain at Hutchins Cross Roads and D Costa Cross Roads in Ward No.59, Maruthi Seva Nagara | 100.00 |

. . .6/-

| | | | |
|---|---|---|---|
| 20. | 59 | Comprehensive Developments of Roads and Drain at Vivekananda Nagara, Jai Bharath Nagara and Surrounding area in Ward No.59, Maruthi Seva Nagara. | 150.00 |
| 21. | 49 | Comprehensive Developments of Roads, Drain and Culverts at KSFC Layout and Surrounding area in Ward No.49, Lingarajapura | 100.00 |
| 22. | 49 | Comprehensive Developments of Roads and Drain at Old Lingarajapura and Surrounding area in Ward No.49, Lingarajapura. | 100.00 |
| 23. | 49 | Comprehensive Developments of Roads and Drain at Kariyanna Palya and Janakiram Layout and Surrounding area in Ward No.49, Lingarajapura. | 150.00 |
| | | **SUB TOTAL** | **3,100.00** |
| | **III.** | **BUILDINGS & OTHER ALLIED WORKS IN SARVAGNANAGAR CONSTITUENCY** | |
| 1. | 24 | Providing and Supplying Machineries and Equipment to Multispeciality Hospital at HBR Layout, Sarvagnanagar Constituency | 500.00 |
| 2. | 24 | Comprehensive Developments of Lake at Sy.No.153, in H.B.R., Ward No.24, Sarvagnanagar Constituency | 500.00 |
| 3. | 59 | Providing Balance works in Dhobi Ghot and Gangmen Quatress in Ward No.59, Maruthi Seva Nagara | 300.00 |
| 4. | 59 | Providing and installation of Machineries for Dhobhi Ghat, Lazar Road, M.S. Nagar, Sarvagnanagar Constituency | 200.00 |
| 5. | | Drilling and Maintenance of Borewells in Sarvagnanagar Constituency | 100.00 |
| | | SUB TOTAL | **1,600.00** |
| | | **IV. DEVELOPMENT AND UPGRADATION OF B.B.M.P. PARKS IN SARVAGNANAGAR CONSTITUENCY** | |
| 1. | 24 | Upgradation and landscape development and maintenance of HBR Layout 18th Main Road, 5th Block, Telecom Layout in Ward No.24 | 5.00 |
| 2. | 24 | Upgradation and landscape development and maintenance of HBR Layout 5th Cross, 5th Block, Telecom Layout in Ward No.24 | 5.00 |
| 3. | 24 | Upgradation and landscape development and maintenance of HBR Layout 5th Block, 17th Main Road Park, in Ward No.24 | 5.00 |
| 4. | 24 | Drilling of new borewells and civil repairs maintenance in Ward No.24, HBR Layout | 10.00 |
| 5. | 27 | Upgradation and landscape development and maintenance of Dr. Raj Kumar Park, Kammanahalli in Ward No.27 | 40.00 |

...7/-

| | | | |
|---|---|---|---|
| 6. | 27 | Upgradation and landscape development and maintenance of Kalyan Nagar 1st Block 8th Main Road Park Harijana Crematorium in Ward No.27 | 40.00 |
| 7. | 27 | Upgradation and landscape development and maintenance of HRBR Layout 2nd Block, 6th Cross, Kalyan Nagar Park, in Ward No.27 | 15.00 |
| 8. | 27 | Drilling of new borewells and civil repairs maintenance in Ward No.27, Banaswadi | 20.00 |
| 9. | 28 | Upgradation and landscape development and maintenance of Ramaswamy Palya Park Part 1 & Part 2 in Ward No.28 | 20.00 |
| 10. | 28 | Upgradation and landscape development and maintenance of Kammanahalli Rock Park in Ward No.28 | 20.00 |
| 11. | 28 | Drilling of new borewells and civil repairs maintenance in Ward No.28, Kammanahalli | 20.00 |
| 12. | 30 | Upgradation and landscape development and maintenance of park in Pillanna Garden 3rd Stage Dr.B.R.Ambedkar Park in Ward No.30, K.G.Halli | 15.00 |
| 13. | 30 | Upgradation and landscape development and maintenance of park in Pillanna Garden 10th Main, 2nd Stage in Ward No.30, K.G.Halli | 5.00 |
| 14. | 30 | Drilling of new borewells and civil repairs maintenance in Ward No.30, K.G.Halli | 10.00 |
| 15. | 49 | Upgradation and landscape development and maintenance of park in Seth Palya Aravind Nagar Park (Oil Mill Road) in Ward No.49 | 5.00 |
| 16. | 49 | Drilling of new borewells and civil repairs maintenance in Ward No.49, Lingarajapuram | 10.00 |
| 17. | 59 | Upgradation and landscape development and maintenance of BBMP Park, Cooke Town (Ambedkar Dental College Opposite) in Ward No.59 | 25.00 |
| 18. | 59 | Upgradation and landscape development and maintenance of park and borewell facilities in High Street Park, Cooke Town Park in Ward No.59 | 20.00 |
| 19. | 59 | Drilling of new borewells and civil repairs maintenance in Ward No.59, M.S.Nagar | 10.00 |
| | | **SUB TOTAL** | **300.00** |
| | | **GRAND TOTAL** | **8,000.00** |

**ಷರತ್ತುಗಳು:**

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿವಿಧ ಮೂಲಭೂತ ಸೌಕರ್ಯ ಮತ್ತು

. . .8/-

ರಸ್ತೆಗಳ ದುರಸ್ತಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಒಟ್ಟು ರೂ.80.00 ಕೋಟಿಗಳ ಅಂದಾಜು ಮೊತ್ತದ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿದ್ದು, ಅನುವು ಮಾಡಿರುವ ರೂ.80.00 ಕೋಟಿಗಳಿಗೆ ಮೀರಿದ ಯಾವುದೇ ವೆಚ್ಚ ಮತ್ತು ಟೆಂಡರ್ ಪ್ರೀಮಿಯಂಗಾಗಿ ಮಾಡುವ ವೆಚ್ಚವನ್ನು ಬಿಬಿಎಂಪಿಯು ತನ್ನ ಸ್ವಂತ ಅನುದಾನದಿಂದ ಭರಿಸತಕ್ಕದ್ದು. ಟೆಂಡರ್ ಪ್ರೀಮಿಯಂ ಮೊತ್ತವನ್ನು ಅಂದಾಜಿನಲ್ಲಿ ಅನುವು ಮಾಡತಕ್ಕದ್ದಲ್ಲ.

2. ಸದರಿ ಕಾಮಗಾರಿಗಳನ್ನು ರೂ.10.00 ಕೋಟಿಗಳಿಗೆ ಕಡಿಮೆ ಇರದಂತೆ ಪ್ಯಾಕೇಜ್ ಗಳನ್ನು ಮಾಡಿ, ಪ್ಯಾಕೇಜ್ ಕಾಮಗಾರಿಗಳನ್ನು ಕೆ.ಟಿ.ಪಿ.ಪಿ ಕಾಯ್ದೆ-1999 ಮತ್ತು ಕೆ.ಟಿ.ಪಿ.ಪಿ ನಿಯಮಗಳು-2000 ಹಾಗೂ e-procurement ಮುಖಾಂತರ ಕೈಗೊಂಡು, ಟೆಂಡರ್ ಗಳಿಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 47 ಎಸ್.ಎಫ್.ಸಿ 2016, ಬೆಂಗಳೂರು, ದಿನಾಂಕ: 14-06-2016 ಮತ್ತು 03-11-2016 ರಂತೆ ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಪಡೆದು, ಕಾಮಗಾರಿಗಳನ್ನು ಮುಂದಿನ ಎರಡು ವರ್ಷಗಳಲ್ಲಿ ಹಂತ ಹಂತವಾಗಿ ಅನುಷ್ಠಾನಗೊಳಿಸುವುದು. ಯಾವುದೇ ಕಾಮಗಾರಿಗಳನ್ನು ವಿಭಜಿಸತಕ್ಕದ್ದಲ್ಲ.
3. ಈ ಕ್ರಿಯಾ ಯೋಜನೆಯಲ್ಲಿ ಒಳಗೊಂಡಿರುವ ಕಾಮಗಾರಿಗಳು ಇತರೆ ಯಾವುದೇ ಯೋಜನೆ / ಅನುದಾನದಡಿಯಲ್ಲಿ ಪುನರಾವರ್ತನೆಯಾಗಿರುವುದಿಲ್ಲ ಎಂಬ ಬಗ್ಗೆ ಮುಖ್ಯ ಆಯುಕ್ತರು, ಬಿಬಿಎಂಪಿ ರವರು ಪೂರ್ವಾನ್ವಯವಾಗಿ ಖಚಿತ ಪಡಿಸಿಕೊಂಡು ಟೆಂಡರ್ ಆಹ್ವಾನಿಸತಕ್ಕದ್ದು.
4. ಅನುಮೋದಿತ ಕ್ರಿಯಾಯೋಜನೆಯಲ್ಲಿ ಎಸ್.ಸಿ.ಎಸ್.ಪಿ / ಟಿ.ಎಸ್.ಪಿ ಕಾಯ್ದೆ ಪ್ರಕಾರ ಕಾಮಗಾರಿಗಳನ್ನು ಅಳವಡಿಸಿಕೊಂಡು ಟೆಂಡರ್ ಕರೆದು ಅನುಷ್ಠಾನಗೊಳಿಸುವುದು ಬಿಬಿಎಂಪಿಯ ಮುಖ್ಯ ಆಯುಕ್ತರ ವೈಯಕ್ತಿಕ ಜವಾಬ್ದಾರಿಯಾಗಿರುತ್ತದೆ. ಈ ಆದೇಶ ಹೊರಡಿಸಿದ ಒಂದು ತಿಂಗಳೊಳಗಾಗಿ ಬಿಬಿಎಂಪಿಯ ಮುಖ್ಯ ಆಯುಕ್ತರು ತಮ್ಮ ಹಂತದಲ್ಲಿ ಕ್ರಿಯಾ ಯೋಜನೆಯ ಕಾಮಗಾರಿಗಳನ್ನು ಎಸ್.ಸಿ.ಎಸ್.ಪಿ / ಟಿ.ಎಸ್.ಪಿ ಕಾಯ್ದೆ ಪ್ರಕಾರ ಕಾಮಗಾರಿಗಳಾಗಿ ವಿಂಗಡಿಸಿ ಆದೇಶ ಹೊರಡಿಸಿ ಸರ್ಕಾರಕ್ಕೆ ವರದಿ ಸಲ್ಲಿಸುವುದು.
5. ಕಾಮಗಾರಿಗಳ ಗುಣಮಟ್ಟದ ಬಗ್ಗೆ ಸಂಬಂಧಪಟ್ಟ ಬಿಬಿಎಂಪಿಯ ಪ್ರಧಾನ ಅಭಿಯಂತರರು ಹಾಗೂ ಸಂಬಂಧಪಟ್ಟ ಮುಖ್ಯ ಅಭಿಯಂತರರುಗಳು ನಿಗಾವಹಿಸಿ, ಉತ್ತಮ ಗುಣಮಟ್ಟದ ಆಸ್ತಿ ಸೃಜನೆಗೆ ಕಟ್ಟುನಿಟ್ಟಿನ ಕ್ರಮ ವಹಿಸತಕ್ಕದ್ದು.
6. ಮುಖ್ಯ ಆಯುಕ್ತರು, ಬಿಬಿಎಂಪಿ ರವರು ಕಾಮಗಾರಿಗಳ ಗುಣಮಟ್ಟದ ಬಗ್ಗೆ ಪ್ರತಿಷ್ಠಿತ ಸಂಸ್ಥೆಗಳಿಂದ ಗುಣಮಟ್ಟದ ತಪಾಸಣಾ ಕೈಗೊಂಡು ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.
7. ಈ ಆದೇಶದಲ್ಲಿ ಅನುಮೋದನೆ ನೀಡಿರುವ ಕಾಮಗಾರಿಗಳ ಅನುಷ್ಠಾನ ವೇಳಾಪಟ್ಟಿಯನ್ನು ಮುಖ್ಯ ಆಯುಕ್ತರು, ಬಿಬಿಎಂಪಿ ರವರು ತಯಾರಿಸಿ,

. . .9/-

ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಹಾಗೂ ಕಾಮಗಾರಿಗಳ ಪ್ರಗತಿ ವರದಿಯನ್ನು ಪ್ರತಿ ಮಾಹೆ ಎಂಪಿಕ್ ಸಭೆಗೆ ಸರ್ಕಾರಕ್ಕೆ ತಪ್ಪದೆ ಸಲ್ಲಿಸತಕ್ಕದ್ದು.

8. ಸರ್ಕಾರವು ಅನುಮೋದನೆ ನೀಡಿರುವ ಕಾಮಗಾರಿಗಳನ್ನು ಬದಲಾವಣೆ ಮಾಡತಕ್ಕದ್ದಲ್ಲ. ಯಾವುದಾದರೂ ಅನುಮೋದಿತ ಕಾಮಗಾರಿಯ ಅಗತ್ಯವಿಲ್ಲವೆಂದು ಆ ನಂತರದಲ್ಲಿ ತಿಳಿದುಬಂದಲ್ಲಿ ಸಂಬಂಧಪಟ್ಟ ಅಂದಾಜು ಮೊತ್ತವನ್ನು ಉಳಿತಾಯವೆಂದು ಪರಿಗಣಿಸತಕ್ಕದ್ದು.
9. ಕರ್ನಾಟಕ ಆರ್ಥಿಕ ಸಂಹಿತೆ-1958, ಸಾಧಿಲ್ವಾರು ವೆಚ್ಚ ಕೈಪಿಡಿ ಅಧಿನಿಯಮ ಹಾಗೂ ಕಾಲಕಾಲಕ್ಕೆ ಚಾಲ್ತಿಯಲ್ಲಿರುವ ಎಲ್ಲಾ ಕಾಯ್ದೆ ನಿಯಮಗಳನುಸಾರ ಕ್ರಮವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಲಕ್ಷ್ಮೀಸಾಗರ್ ಎನ್.ಕೆ.)**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

**ಇವರಿಗೆ:**

1. ಮಹಾಲೇಖಪಾಲರು, ಲೆಕ್ಕ ತಪಾಸಣೆ/ಲೆಕ್ಕಪತ್ರ, ಕರ್ನಾಟಕ ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಆಡಳಿತಗಾರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಆಪ್ತ ಕಾರ್ಯದರ್ಶಿ, ಬೆಂಗಳೂರು.
6. ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
7. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.